# 4

# ದಾಸ್ಯದ ಕಾಲಾವಧಿ

## ಐಗುಪ್ತಕ್ಕೆ ವಲಸೆ ಹೋದದ್ದರಿಂದ ಹೊರಡೋಣದ ವರೆಗೆ

## ಕ್ರಿ.ಪೂ. 1706-1491 (ವಿಮೋಚನಕಾಂಡ 1-14)

### I. ಇಬ್ರಿಯರ ದಾಸತ್ವದ ಅವಧಿಯಲ್ಲಿ ಐಗಪ್ತ.

ಪುರಾತನ ಐಗುಪ್ತದ ಚರಿತ್ರೆಯು ಕೆಲವು ಸಲ ಮೂರು ಕಾಲಾವಧಿಗಳಲ್ಲಿ ವಿಭಾಗಿಸಲ್ಪಟ್ಟಿರುತ್ತದೆ:

**1. ಪುರಾತನ ಸಾಮ್ರಾಜ್ಯ.** ತಿಳಿಯದ ಪ್ರಾಚೀನತೆಯಿಂದ, ಕ್ರಿ.ಪೂ. 2100 ವರೆಗೆ.

**2. ಮಧ್ಯ ಇಲ್ಲವೇ ಹಿಕ್ಸೋಸ ಸಮ್ರಾಜ್ಯ,** ಕ್ರಿ.ಪೂ. 2100-1650.

**3. ನೂತನ ಸಾಮ್ರಾಜ್ಯ,** ಕ್ರಿ.ಪೂ. 1650-525. ಹಿಕ್ಸೋಸರ ಹೊರದಬ್ಬುವಿಕೆಯಿಂದ ಪರ್ಶಿಯನ್ ಸಾಮ್ರಾಜ್ಯದಿಂದ ಐಗುಪ್ತವು ವಶಪಡಿಸಿಕೊಳ್ಳಲ್ಪಡುವವರೆಗೆ.

ಮೊದಲನೆಯ ಅವಧಿಯಲ್ಲಿ, ಮೆನೆಸನು ಕೆಳಗಿನ ಐಗುಪ್ತದ ಕುಲಗಳನ್ನು ಒಂದುಗೂಡಿಸಿದನು, ಮತ್ತು ಅತೀ ಪುರಾತನ ರಾಜಧಾನಿ ಮೆಂಫಿಸ್‌ನ್ನ ಸ್ಥಾಪಿಸಿದನು ಮತ್ತು ಐಗುಪ್ತದ ಮೇಲೆ ಆಳ್ವಿಕೆ ನಡಿಸಿದ ಮೂವತ್ತೊಂದು ರಾಜವಂಶಗಳಲ್ಲಿ ಮೊದಲನೆಯದನ್ನು ಸ್ಥಾಪಿಸಿದನು. ಶತಮಾನಗಳ ನಂತರ ನಾಲ್ಕನೆಯ ರಾಜ ವಂಶವು ದೊಡ್ಡ ಪಿರಾಮಿಡ್ಡುಗಳನ್ನು ಕಟ್ಟಿತು. ಇನ್ನೂ ಅನಂತರ ಈ ಅವಧಿಯಲ್ಲಿ ಹನ್ನೆರಡನೆಯ ರಾಜವಂಶವು ಅಧಿಕಾರದ ಕೇಂದ್ರವನ್ನು ಮೇಲಿನ ಐಗುಪ್ತದಲ್ಲಿ ಥೆಬೆಸೆಗೆ ವರ್ಗಾಯಿಸಿತು, ಅಲ್ಲಿ ಮೊದಲನೆಯ ಅವಧಿಯ ಅತೀ ಪ್ರಖ್ಯಾತವಾದ ಯುಗವು ಪ್ರಾರಂಭಿಸಲ್ಪಟ್ಟಿತು.

ಹಿಕ್ಸೋಸ ಇಲ್ಲವೇ ಕುರುಬ ಅರಸರು, ಮಧ್ಯ ಸಮ್ರಾಜ್ಯದವರು ಆಶಿಯಾದಿಂದ ಬಂದ ಸೇಮಿಟಿಕ್ ವಲಸೆಗಾರರಾಗಿದ್ದರು. ಮೊದಲು ಕ್ರೂರ ಅನಾಗರಿಕರಾಗಿದ್ದರೂ ಸಮರ್ಥ ಸಂಘಟನೆಗಾರಾಗಿದ್ದರೂ, ಅವರ ಆಡಳಿತೆಯಲ್ಲಿ ಐಗುಪ್ತದ ಸಂಸ್ಕೃತಿಯು ಅವನತಿಯನ್ನು ಅನುಭವಿಸಿತು.

ನೂತನ ಸಾಮ್ರಾಜ್ಯವು ಆಮೊಸಿಸನಿಂದ ಪ್ರಾರಂಭಿಸಲ್ಪಟ್ಟಿತು, ಅವನು ಹಿಕ್ಸೋಸ ರನ್ನು ಹೊರಗೆ ಹಾಕಿದನು ಹಾಗೂ ಪ್ರಸಿದ್ಧ ಹದಿನೆಂಟನೆಯ ರಾಜವಂಶವನ್ನು ಸ್ಥಾಪಿಸಿದನು. ಅದು ಥೊಥ್ಮೆಸ್ IIIನನ್ನು, ಐಗುಪ್ತರ ಅಲೆಕ್ಸಾಂಡರನನ್ನು ಒಳಗೊಂಡಿತ್ತು. ಇದು, ಹತ್ತೊಂಭತ್ತನೆಯ ರಾಜವಂಶದೊಂದಿಗೆ ಐಗುಪ್ತತ ಚರಿತ್ರೆಯಲ್ಲಿ ಅತೀ ಶ್ರೇಷ್ಠವಾದ ಶಕವನ್ನು ರಚಿಸಿತು, ಕಲ್ದೀಯದಿಂದ ಹಿಬ್ರೂ ವಲಸೆಯು ಬಹುಶಃ ಮೊದಲಿನ ಭಾಗದಲ್ಲಿ ಸಂಭವಿಸಿದಂತೆ ಕಾಣುತ್ತದೆ ಹಾಗೂ ಅವರು ಐಗುಪ್ತಕ್ಕೆ ಮಧ್ಯ ಅವಧಿಯ ಅನಂತರ ವಲಸೆ ಬಂದಿರ ಬಹುದಾಗಿದೆ, ಇದು ಫರೋಹರು ಅಬ್ರಹಾಮ, ಯೋಸೇಫ ಮತ್ತು ಯಾಕೋಬರನ್ನು ನಡಿಸಿದ್ದರ ಬಗ್ಗೆ ಗಣನೆಗೆ ಬರುತ್ತದೆ. ಕೆಲವು ಸಲ ತಾವೇ ಪರದೇಶದವರಿಗಾಗಿ ಐಗುಪ್ತ್ಯರ ದ್ವೇಷವನ್ನು ಹಂಚಿಕೊಳ್ಳುತ್ತಿರಲಿಲ್ಲ.

## II. ದಬ್ಬಾಳಿಕೆ.

ಆದಿಕಾಂಡವು ಇಬ್ರಿಯರು ಐಗುಪ್ತರೊಂದಿಗೆ ಅತಿಯಾದ ಮೆಚ್ಚಿಕೆಯಲ್ಲಿರುವುದರೊಂದಿಗೆ ಮುಕ್ತಾಯವಾಗುತ್ತದೆ. ವಿಮೋಚನಕಾಂಡವು ಗುಲಾಮರ ಕುಲದೊಂದಿಗೆ ಪ್ರಾರಂಭವಾಗುತ್ತದೆ. ಐಗುಪ್ತ ದೇಶವು "ದಾಸತ್ವದ ಮನೆ" ಆಗಿತ್ತು. ಪರಿಶುದ್ಧ ಇತಿಹಾಸವು ಹೋಗುವಂತೆ ಇವು ಮಧ್ಯೆಪ್ರವೇಶಿಸಿದ ಮೌನ ಶತಮಾನಗಳಾಗಿದ್ದವು.[1] ರಾಜವಂಶಗಳು ಏಳಬಹುದು ಬೀಳಬಹುದು, ದೂರದ ಯುದ್ಧಗಳು ಸಂಭವಿಸಬಹುದು, ಆಕರ್ಷಣೀಯ ದೇವಾಲಯಗಳು, ಅವುಗಳ ಉಳುಹುಗಳು ಇನ್ನೂ ಜಗತ್ತಿಗೆ ಆಕರ್ಷಕವಾಗಿರುವುದು, ಕಟ್ಟಲ್ಪಡಬಹುದು, ಆದರೆ ಕೇವಲ ಲೌಕಿಕ ಮಹಿಮೆಗೆ ದೈವಿಕ ದಾಖಲೆಯಲ್ಲಿ ಸ್ಥಳವಿರುವುದಿಲ್ಲ. ವಾಗ್ದಾನ ಮಾಡಲ್ಪಟ್ಟ ವಿಮೋಚನೆಯ ಉತ್ಕ್ರಾಂತಿಯಲ್ಲಿ ಕಥೆಯು ಪುನಃ ಪ್ರಾರಂಭಿಸಲ್ಪಡುವುದು ನೂತನ ಪ್ರಗತಿಗಾಗಿ ಸಮಯವು ಬರುವವರೆಗೆ ಆಗುವದಿಲ್ಲ.

ಅಂತೂ ಕೊನೆಗೆ, "ಯೋಸೇಫನನ್ನು ಅರಿಯದ ಬೇರೊಬ್ಬ ಅರಸನು ಐಗುಪ್ತದೇಶದ ಆಳ್ವಿಕೆಗೆ ಬಂದನು" (ವಿಮೋಚನಕಾಂಡ 1:8). ಅತೀ ದೊಡ್ಡ ಲಾಭಗಳು ಬೇಗನೇ ಮರೆಯಲ್ಪಟ್ಟವು. ಸಲಾಮಿಸಿನ ಹದಿನಾಲ್ಕು ವರ್ಷಗಳೊಳಗೆ, ಥೆಮಿಸ್ಟೋಕ್ಲೆಸನು ಹೊರದೊಬ್ಬಲ್ಪಟ್ಟನು; ವಾಟರಲೂದ ಹದಿನೇಳು ವರ್ಷಗಳೊಳಗೆ ವೆಲ್ಲಿಂಗ್ಟನ್‌ದ ಡ್ಯೂಕನು ಲಂಡನ್ ಜನಸಮೂಹದಿಂದ ದಾಳಿಗೆ ಬಲಿಯಾದನು. ಹಿಬ್ರೂ ಯೋಸೇಫನಿಂದ ಸಲ್ಲಿಸಲ್ಪಟ್ಟ ಮಹಾ ಸೇವೆಯ ಭಾವನೆಯು ಶತಮಾನಗಳ ಸಮಯದ ಮೇಲೆ ಅಳಿಸಿ ಹಾಕಲ್ಪಟ್ಟಿತು ಎಂಬುಕ್ಕೆ ನಾವು ಆಶ್ಚರ್ಯಪಡಬೇಕಾಗಿಲ್ಲ. "ಹೊಸ ಅರಸನು" ಬಹುಶಃ ಸೆಮಿಟಕ್ ಹಿಕ್ಸೋಸರನ್ನು ಐಗುಪ್ತದಿಂದ ಹೊಡೆದೋಡಿಸಿದ ಮತ್ತು ಸ್ಥಳಿಯ ನಾಯಕರನ್ನು ಪುನಃಸ್ಥಾಪಿಸಿದ ಕ್ರಾಂತಿಯನ್ನು ತೋರಿಸುತ್ತದೆ. ದಾಸತ್ವದ ಮತ್ತು ಹೊರಡೋಣದ ಫರೋಹರು ಸೇಟಿ I. ರಾಮ್ಸೆಸ್ II. ಮತ್ತು ಮೆನೆಪ್ತಾಹ, ಎಲ್ಲರೂ ಹತ್ತೊಂಭತ್ತನೆಯ ರಾಜವಂಶದ ಅರಸರೆಂದು ತಿಳಿಯಲ್ಪಟ್ಟಿದೆ. ಸೇಟಿಯು ಇಬ್ರಿಯರ ತೀವ್ರ ಬೆಳವಣಿಗೆಯ ಬಗ್ಗೆ ಚಕಿತಗೊಂಡು, ಹಿಕ್ಸೋಸರ ದಾಳಿಯನ್ನೂ ದೀರ್ಘಕಾಲ ರಾಜ್ಯವಶಪಡಿಸಿಕೊಂಡದ್ದನ್ನು ಜ್ಞಾಪಿಸಿಕೊಂಡನು, ಇಬ್ರೀಯರನ್ನು ಮುರಿಯಲು ತೀರ್ಮಾನಿಸಿಕೊಂಡನು. ಅವನು ಅವರನ್ನು ಬ್ರಿಕ್‌ಯಾರ್ಡ್‌ಗಳಲ್ಲಿ ವ್ಯರ್ಥ ದುಡಿಮೆಯವರನ್ನಾಗಿ ಕೀಳುಮಟ್ಟಕ್ಕೆ ತಂದನು, ಆದರೂ ಅವರು ವೃದ್ಧಿಯಾಗುತ್ತಲೇ ಇದ್ದರು. ಕೊನೆಗೆ ಪ್ರತಿಯೊಂದು ಗುಂಡು ಕೂಸು ನೈಲನದಿಯೊಳಗೆ ಎಸೆಯಲ್ಪಡಬೇಕೆಂದು ಆಜ್ಞಾಪಿಸಿದನು. ಆಮೇಲೆ ವಿಮೋಚಕನು ಬಂದನು.

## III. ಮೋಶೆಯ ಜನನ ಮತ್ತು ನಿಯೋಗ.

ಎಲ್ಲದರಲ್ಲಿ ಎಲ್ಲವನಾಗಿ, ದೇಶಭಕ್ತನಂತೆ, ಕವಿಯಂತೆ, ವಿಮೋಚಕನಂತೆ, ಧರ್ಮಶಾಸ್ತ್ರ ಕೊಟ್ಟವನಂತೆ, ಚರಿತ್ರೆಗಾರನಂತೆ, ಮನುಷ್ಯನಂತೆ ಮೋಶೆಯು ಚರಿತ್ರೆಯಲ್ಲಿ ಅತಿದೊಡ್ಡ ಮನುಷ್ಯನಾಗಿದ್ದಾನೆ. ಹದಿನೆಂಟನೆಯ ಮತ್ತು ಹತ್ತೊಂಭತ್ತನೆಯ ರಾಜವಂಶದ ಫರೋಹರರು ತಮ್ಮ ಬಲವಾದ ಕಾರ್ಯಗಳನ್ನು ಶಿಲೆಯಲ್ಲಿ ಕಡೆದಿಟ್ಟಿರುವರು, ಆದಾಗ್ಯೂ ಅವರ ಹೆಸರುಗಳು ಇತ್ತೀಚೆಗೆ ಪ್ರಕಟವಾದ ಮಮ್ಮಿಗಳ ಫೋಟೋ ಗ್ರಾಫಿಗಳಂತೆ ಛಾಯೆಗಳಾಗಿವೆ. ಮೋಶೆಯು ಜನಾಂಗದ ಮೇಲೆ ಮತ್ತು ಒಂದು ಧರ್ಮದ ಮೇಲೆ ತನ್ನ ದಾಖಲೆಯನ್ನು ಬರೆದನು. ದೇವರ ಜನರನ್ನು ಹೋಗಲು ಗರ್ವಿಯಾದ ಫರೋಹನಿಂದ ಒಪ್ಪಿಗೆಯನ್ನು ಪಡೆದು ರಾತ್ರಿಯಿಂದ ಮೂವತ್ತೂರು ಶತಮಾನಗಳು ದಾಟಿಹೋದನಂತರವೂ ಅವನ ಹೆಸರು ಅತಿದೊಡ್ಡದಾಗಿದೆ: ಅವನ

ಜೀವಿತವು ಸ್ವಾಭಾವಿಕವಾಗಿ ಮೂರು ಸಮಾನಭಾಗಗಳಲ್ಲಿ ಬರುತ್ತದೆ: ಐಗುಪ್ತದಲ್ಲಿ ನಲ್ವತ್ತು ವರ್ಷ; ಮಿದ್ಯಾನಿನಲ್ಲಿ ನಾಲ್ವತ್ತು ವರ್ಷ ಏಕಾಂತ ಕಾಲ; ಇಸ್ರಾಯೇಲಿನ ವಿಮೋಚಕನಂತೆ, ನಾಯಕನಂತೆ ಮತ್ತು ಸಂಘಟಿಕನಂತೆ ನಾಲ್ವತ್ತು ವರ್ಷ, ಕೊನೆಯ ನಾಲ್ವತ್ತು ವರ್ಷಗಳಲ್ಲಿಯ ಅವನ ಇತಿಹಾಸವು ಅವನ ಜನಾಂಗದ ಇತಿಹಾಸವಾಗಿದೆ, ಮತ್ತು ಮುಂದಿನ ಅವಧಿಯಲ್ಲಿ ಮುಖ್ಯವಾಗಿ ಬೀಳುತ್ತದೆ.

**1. ಐಗುಪ್ತದಲ್ಲಿ ನಾಲ್ವತ್ತು ವರ್ಷ.**-*a. ಅವನ ಜನನ ಮತ್ತು ಶಿಕ್ಷಣ.*-ಮೋಶೆಯು ಲೇವಿ ಕುಲದ, ಅಮ್ರಾಮ ಮತ್ತು ಯಾಕೆಬೇದ್ ಎಂಬ ಭಕ್ತಿವಂತ ತಂದೆತಾಯಿಗಳಿಂದ ಜನಿಸಿದನು. ಅವನ ಹಿರಿಯ ಮಕ್ಕಳು, ಮಿರಿಯಾಮ ಮತ್ತು ಆರೋನರು ಸೇಟಿಯ ಕೊಲೆಗಾರ ಆಜ್ಞೆಯ ಮೊದಲು ಜನಿಸಿದಂತೆ ತೋರುತ್ತದೆ: ಅವರ ಮೂರನೆಯ ಮಗು ಹಾಗಾಗಲಿಲ್ಲ, ಅವನ ಜನನವು ಮೂರು ತಿಂಗಳುಗಳವರೆಗೆ ಅಧಿಕಾರಿಗಳಿಂದ ಮುಚ್ಚಿಡಲ್ಪಟ್ಟಿತು. ರಹಸ್ಯವಾಗಿಡುವುದು ಅಸಾಧ್ಯವಾದಾಗ, ಸುಂದರವಾದ ಮಗುವು ಆಪುಹುಲ್ಲಿನ ಬುಟ್ಟಿಯಲ್ಲಿ ನೈಲ್ ನದಿಯೊಳಗೆ ಬಿಡಲ್ಪಟ್ಟಿತು. ಫರೋಹನ ಮಗಳು ಕಂಡುಕೊಂಡು, ಅವನನ್ನು ದತ್ತು ತೆಗೆದುಕೊಳ್ಳುತ್ತಾಳೆ ಮತ್ತು ಮೋಶೆ ಎಂದು ಅವನಿಗೆ ಹೆಸರಿಡುತ್ತಾಳೆ. ನಾಜೂಕಾದ ಬುಟ್ಟಿಯನ್ನು ಹಿಂಬಾಲಿಸಿದ ಮಿರಿಯಾಮಳು ಒಬ್ಬ ದಾದಿಯನ್ನು ಕರೆತರಲು ಒಪ್ಪಿಕೊಂಡು, ತನ್ನ ಸ್ವಂತ ತಾಯಿಯನ್ನು ಕರೆದು ಕೊಂಡು ಬರುತ್ತಾಳೆ. ಹೀಗೆ, ದೇವರ ಸ್ವಂತ ನಡಿಸುವಿಕೆಯಲ್ಲಿ, ಭವಿಷ್ಯದ ಸ್ನೇಹಿತನು, ಬಿಡುಗಡೆಮಾಡುವವನು ಮತ್ತು ಜನಾಂಗದ ಸಂಘಟಿಕನು ಆಗ ಜಗತ್ತಿನಲ್ಲಿ ಸಾಧ್ಯವಿದ್ದ ಅತ್ಯುನ್ನತ ಬೌದ್ಧಿಕ ಸಂಸ್ಕೃತಿಯಲ್ಲಿ ಬೆಳಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 7:22), ಮತ್ತು ತನ್ನ ಹಿಬ್ರೂ ತಾಯಿಯಿಂದ ಆಗ ಜಗತ್ತಿನಲ್ಲಿ ಅತೀ ಘನವಾದ ಆತ್ಮಿಕ ನಂಬಿಕೆಯಲ್ಲಿ ಬೆಳಸಲ್ಪಟ್ಟನು.

*b. ಮೋಶೆಯ ಆಯ್ಕೆ.*-ಮೋಶೆಯು ಯೌವನ ಪ್ರಾಯದವನಾದನು. ಅವನ ಹಿಬ್ರೂ ಮೂಲದ ರಹಸ್ಯವು ಅವನದಾಗಿತ್ತು. ಐಗುಪ್ತ್ಯನೊಬ್ಬನು ಒಬ್ಬ ಇಬ್ರಿಯನನ್ನು ಹೊಡೆಯುತ್ತಿರುವುದನ್ನು ಕಂಡು ಮೋಶೆಯು ಐಗುಪ್ತನನ್ನು ಕೊಂದು ಅವನ ದೇಹ ವನ್ನು ಮರಳಿನಲ್ಲಿ ಮುಚ್ಚಿಟ್ಟನು. ಮೋಶೆಯು ಬಿಸಿರಕ್ತವುಳ್ಳವನಾಗಿದ್ದು, ಅನ್ಯಾಯದ ಕಡೆಗೆ ಅವನ ರಕ್ತ ಕುದಿದ್ದಿರಬೇಕು. ಆದರೆ ಆ ಕಾರ್ಯವು ಕ್ಷಣಿಕ ಉದ್ವೇಗದ ಒತ್ತಡದ ಕಾರ್ಯವಾಗಿರಲಿಲ್ಲ. ಇಬ್ರಿಯ 11:24-26 ಮತ್ತು ಅಪೊಸ್ತಲರ ಕೃತ್ಯಗಳು 7:23-25ರಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತದೆ: (1) ದಾಸಿತ್ವದಲ್ಲಿದ್ದ ತನ್ನ ಸಹೋದರರೊಂದಿಗೆ ತನ್ನನ್ನು ಒಂದಾಗಿ ಮಾಡಿಕೊಳ್ಳಲು ಅವನು ಬುದ್ಧಿಪೂರ್ವಕವಾ ಗಿಯೂ ಸ್ವಯಂ ಪ್ರೇರಣೆಯಿಂದಲೂ ಐಗುಪ್ತದಲ್ಲಿ ರಾಜತ್ವವು ಕೊಡುವ ಎಲ್ಲವನ್ನೂ ತ್ಯಜಿಸಿಬಿಟ್ಟನು; (2) ಅವನು ಸ್ವಾತಂತ್ರಕ್ಕಾಗಿ ಧೈರ್ಯದ ಮುನ್ನುಗ್ಗುವಂತೆ ಇಸ್ರಾಯೇಲ್ಯ ರನ್ನು ಎಬ್ಬಿಸುವುದನ್ನು ನಿರೀಕ್ಷಿಸಿದನು. ಆದರೆ ಸಮಯವು ಇನ್ನೂ ಪಕ್ವವಾಗಿರಲಿಲ್ಲ ಮತ್ತು ಅವನೂ ಇಲ್ಲವೇ ಅವನ ಜನರೂ ಇನ್ನೂ ಸಿದ್ಧವಾಗಿರಲಿಲ್ಲ. ಸರಪಣಿಗಳು ಭಾರವಾದವುಗಳಾಗಬೇಕಿತ್ತು ಹಾಗೂ ಮೋಶೆಯು ತಾನೇ ತನ್ನ ಮಹಾಕಾರ್ಯಕ್ಕಾಗಿ ಶಿಕ್ಷಿಸಲ್ಪಡಬೇಕಾಗಿತ್ತು. ಐಗುಪ್ತವು ಕಲೆಯ ಮತ್ತು ವಿಜ್ಞಾನಗಳ ಒಂದು ಉತ್ತಮ ಶಾಲೆಯಾಗಿತ್ತು; ತನ್ನ ತಾಯಿಯ ಮೊಣಕಾಲುಗಳ ಬಳಿ ಅವನು ಧರ್ಮದ ಪ್ರಾಥಮಿಕ ಪಾಠಗಳನ್ನು ಅರಗಿಸಿಕೊಂಡನು; ಆದರೆ ತನ್ನ ಘನವಾದ ಕಾರ್ಯಕ್ಕೆ ಅವನು ಸನ್ನದ್ಧ ನಾಗುವ ಮೊದಲು ದೇವರೊಂದಿಗೆ ಹೆಚ್ಚು ಒಬ್ಬನೇ ಯಾಗಿರಬೇಕಾಗಿತ್ತು. ಮಿದ್ಯಾನಿನ ಅರಣ್ಯದಲ್ಲಿ ಮತ್ತು ಸಿನಾಯಿಯ ಏಕಾಂತದಲ್ಲಿ, ತನ್ನ ಬೋಧಕನಾದ ದೇವರೊಂದಿಗೆ, ಅವನು ತನ್ನ ವಿಶ್ವವಿದ್ಯಾಲಯವನ್ನು ಕಂಡುಕೊಂಡನು, ಮತ್ತು ತನ್ನ ಡಿಪ್ಲೋಮವನ್ನು

ಸ್ವೀಕರಿಸಿಕೊಂಡನು.

**2. ಮಿದ್ಯಾನಿನಲ್ಲಿ ನಲ್ವತ್ತು ವರ್ಷಗಳು.**-ಮೋಶೆಯು ಕೆಂಪು ಸಮುದ್ರದ ಪೂರ್ವದಲ್ಲಿಯ ಮಿದ್ಯಾನಿಗೆ ಓಡಿ ಹೋದನು. ಅವನು ಒಂದು ಸಾಯಂಕಾಲ ಒಂದು ಬಾವಿಯ ಬಳಿಯಲ್ಲಿ ಒಂದು ಕಲ್ಲಿನ ಮೇಲೆ ಕುಳಿತು ಕೊಂಡಿದ್ದಾಗ, ಮಿದ್ಯನಿನ ಆಚಾರ್ಯನಾದ ಇತ್ರೋನನ ಏಳು ಜನ ಹೆಣ್ಣುಮಕ್ಕಳು ತಮ್ಮ ಕುರಿಮಂದೆಗಳಿಗೆ ನೀರು ಕುಡಿಸಲು ಅಲ್ಲಿಗೆ ಬಂದರು. ಕೆಲವು ಒರಟು ದನಗಾಹಿಗಳು ಅವರ ಹಿಂಡನ್ನು ಓಡಿಸಿದರು. ಮೋಶೆಯು ದಾಸತ್ವಲ್ಲಿದ್ದ ತನ್ನ ಸಹೋದರರ ಕಡೆಗಿದ್ದ ಧೈರ್ಯದ ಮನೋ ಭಾವನೆಯಂತೆಯೇ ದಬ್ಬಾಳಿಕೆ ಗುರಿಯಾಗಿದ್ದ ಹೆಣ್ಣುಮಕ್ಕಳ ಪರವಾಗಿಯೂ ಅದೇ ಮನೋಭಾವನೆಯು ಳ್ಳವನಾಗಿದ್ದನು. ಓಡಿಹೋಗುತ್ತಿದ್ದ "ಐಗುಪ್ತನ" ಈ ಸಮಯೋ ಚಿತ ಸಹಾಯವು ಮೆಚ್ಚಿಕೆಯುಳ್ಳ ಪರಿಚಿತ ಮಾಡಿಕೊಳ್ಳುವಿಕೆಗೆ ರುಜುವಾತಾಯಿತು, ಇತ್ರೋನನ ಮಗಳಾದ ಚಿಪ್ಪೋರಳನ್ನು ಅವನು ಮದುವೆಯಾದನು. ನಾಲ್ವತ್ತು ವರ್ಷಗಳ ವರೆಗೆ ಮದ್ಯಾನಿನಲ್ಲಿ ಕುರಿಕಾಯುವ ಮೌನ ಕೆಲಸದಲ್ಲಿ ಸಮಯ ಕಳೆದನು. ತನ್ನ ಜನರನ್ನು ವಾಗ್ದಾತ್ತ ದೇಶಕ್ಕೆ ನಡಿಸಿಕೊಂಡು ಹೋಗುವ ಕಠಿಣವಾದ ಪ್ರದೇಶದೊಂದಿಗೆ ಪರಿಚಿತಿ ಮಾಡಿಕೊಂಡನು. ಕೊನೆಗೆ ದೇವರು ಉರಿಯುವ ಬೆಂಕಿಯ ಪೊದೆಯಲ್ಲಿ ಕಾಣಿಸಿಕೊಂಡನು, "ಅಬ್ರಹಾಮನ ದೇವರು ಇಸಾಕನ ದೇವರು ಮತ್ತು ಯಾಕೋ ಬನ ದೇವರು" ಎಂಬುದಾಗಿ ದೇವರು ತನ್ನನ್ನು ಪ್ರಕಟಿಸಿಕೊಂಡನು.[2] ಪಿತೃಗಳ ಕಾಲಾವಧಿಯಲ್ಲೆಲ್ಲಾ ಮಹತ್ತದ್ದಾಗಿದ್ದ ಒಡಂಬಡಿಕೆಯನ್ನು ನವೀಕರಿಸಿದನು, ಮತ್ತು ಇಸ್ರಾಯೇಲ್ಯರನ್ನು ವಿಮೋಚಿಸಲು ಮೋಶೆಯನ್ನು ನೇಮಕ ಮಾಡಿದನು. ಮೋಶೆಯು, ಈಗ ಅಂಜುಬುರುಕನಾಗಿ, ಮಾತುಬಾರದವನಂತೆ ನ್ಯಾಯಾಲಯದೊಳಗೆ ಮತ್ತು ಅರಸರ ಮುಂದೆ ಅವನನ್ನು ತೆಗೆದುಕೊಳ್ಳುವುದನ್ನು ನಿರಾಕರಿಸುತ್ತಾನೆ. ಆದರೆ ದೇವರಿಂದ ಕೊಡಲ್ಪಟ್ಟ ಸಂಕೇತಗಳೊಂದಿಗೆ ಸಿದ್ಧನಾಗಿ, ತನ್ನ ಪ್ರತಿನಿಧಿಯಾಗಿ ಆರೋನನೊಂದಿಗೆ, ಮೋಶೆಯು ಐಗುಪ್ತಕ್ಕೆ ಹಿಂದಿರುಗಿ ಬರುತ್ತಾನೆ.

## IV. ದೊಡ್ಡ ಹೋರಾಟ.

ಈಗ ಚರಿತ್ರೆಯಲ್ಲಿ ಅತೀ ಗಮನಾರ್ಹವಾದ ಹೋರಾಟವು ಹಿಂಬಾಲಿಸುತ್ತದೆ. ಮೋಶೆಯು ಮಿದ್ಯಾನನ್ನು ಬಿಟ್ಟು ಹೋಗುತ್ತಿರುವಂತೆ ಆರೋನನ್ನು ಸಂದರ್ಶಿಸುತ್ತಾನೆ. ಇಬ್ಬರೂ ಒಟ್ಟಾಗಿ ತಮ್ಮ ಸ್ವಂತ ಜನರ ಹಿರಿಯರ ಮುಂದೆ ಹೋಗಿ ತನ್ನ ಸೇವೆ ಯನ್ನು ತಿಳಿಸುತ್ತಾರೆ, ಮತ್ತು ನೇಮಕವಾದ ಸಂಕೇತಗಳಿಂದ ದೃಢಪಡಿಸುತ್ತಾರೆ, ಜಜ್ಜಲ್ಪಟ್ಟ ಜನರು ಅವರ ಕಾರ್ಯವನ್ನು ಸ್ವೀಕರಿಸುತ್ತಾರೆ. ಮತ್ತು ತಮ್ಮ ತಂದೆಗಳ ಒಡಂಬಡಿಕೆಯ ದೇವರ ಮುಂದೆ ಭಕ್ತಿಯಿಂದ ಬಾಗುತ್ತಾರೆ. ಅವರು ಫರೋಹನ ಎದುರಿನಲ್ಲಿ ಅಷ್ಟು ಯಶಸ್ವಿಯಾಗುವುದಿಲ್ಲ. ಯೆಹೋವನ ಹೆಸರಿನಲ್ಲಿ ಅವರು ಇಸ್ರಾಯೇಲ್ಯರು ಯೆಹೋವನಿಗೆ ಯಜ್ಞವನ್ನು ಅರ್ಪಿಸಲು ಅರಣ್ಯದೊಳಗೆ ಮೂರು ದಿನ ಪ್ರಯಾಣವಾಗಿ ಹೋಗುವುದನ್ನು ಕೇಳಿಕೊಳ್ಳುತ್ತಾರೆ, ಅಂಥ ಸಾಧಾರಣ ಬೇಡಿಕೆಗೆ ಅಪ್ಪಣೆಕೊಟ್ಟಿದ್ದರೆ ಅದು ಫರೋಹನಿಗೆ ಒಳ್ಳೆಯದಾಗುತ್ತಿತ್ತು, ಜನರಿಗೂ ಮೊದಲನೆಯ ಪರಿಣಾಮವು ಸರಪಣಿಗಳನ್ನು ಬಿಗಿಮಾಡುವುದು ಮತ್ತು ಭಾರವನ್ನು ಹೆಚ್ಚಿಸುವುದು ಮಾತ್ರವೇ ಆಗಿತ್ತು, ಫರೋಹನಿಂದ ಹಟಮಾರಿ ನಿರಾಕರಣೆಯನ್ನು ಎದುರಿಸಿ ಹಾಗೂ ತನ್ನ ಕಷ್ಟಪಡುತ್ತಿರುವ ಸಹೋದರರಿಂದ ಕಹಿಯಾದ ನಿಂದನೆಗಳನ್ನು ಕೇಳಿ ಮೋಶೆಯು ತನ್ನ ಚಾತುರ್ಯತೆಯ ಅಂತ್ಯಕ್ಕೆ ಬಂದನು. ಹತ್ತು ಬಾಧೆಗಳು ಇಲ್ಲವೇ, "ಹೊಡೆತಗಳು," ಪೆಟ್ಟುಗಳ ನಂತರ ಪೆಟ್ಟುಗಳು ಕೊಡಲ್ಪಟ್ಟವು: ನೀರು ರಕ್ತವಾದದ್ದು,

ಕಪ್ಪೆಗಳು, ಹೇನುಗಳು, ನೊಣಗಳು, ದನಗಳವ್ಯಾಧಿ, ಬೊಕ್ಕೆಗಳು, ಆನೆಕಲ್ಲು, ಮಿಡಿತೆಗಳ, ಕತ್ತಲೆ, ಚೊಚ್ಚಲಾಗಿ ಹುಟ್ಟಿದವರ ಮರಣ.

**1. ಹೋರಾಟದ ಸ್ವರೂಪ.**-ಅದು ದಾಸತ್ವದಲ್ಲಿದ್ದ ಜನಾಂಗದ ಮತ್ತು ಅವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದವರ ಮಧ್ಯದಲ್ಲಿಯ ಕೇವಲ ಒಂದು ಹೋರಾಟವಾಗಿರಲಿಲ್ಲ; ಮೋಶೆಯ ಮತ್ತು ಫರೋಹನ ಮಧ್ಯದಲ್ಲಿಯ ಹೋರಾಟವಾಗಿರಲಿಲ್ಲ. ಅದು ಯೆಹೋವ ಮತ್ತು ಐಗುಪ್ತದ ದೇವರುಗಳ ಮಧ್ಯದಲ್ಲಿಯ ವಾಗ್ವಾದ ಆಗಿತ್ತು. ಹೆಚ್ಚಾಗಿ ಪ್ರತಿಯೊಂದು ಪ್ಲೇಗ್ ರೋಗವು ಐಗುಪ್ತದ ನೈಸರ್ಗಿಕವಾದ ಉಪದ್ರವವಾಗಿತ್ತು; ಆದಾಗ್ಯೂ ಅವುಗಳ ಅದ್ಭುತಕರವಾದ ಗುಣಲಕ್ಷಣವು ಹಲವಾರು ಸನ್ನಿವೇಶಗಳಿಂದ ಕಂಡುಬರುತ್ತವೆ; ಅವುಗಳ ತೀವ್ರಗೊಳಿಸುವಿಕೆ, ಅಷ್ಟು ಅವಸರದ ಸರಣಿಯಲ್ಲಿ ದ್ವಿಗುಣಿಕಗೊಳ್ಳುವಿಕೆ; ಮೋಶೆಯ ಮಾತಿನಂತೆ ಅವು ಬರುತ್ತವೆ ಮತ್ತು ಹೋಗುತ್ತವೆ; ಮೊದಲಿನ ಮೂರನ್ನು ಹೊರತುಪಡಿಸಿ ಇಸ್ರಾಯೇಲು ಬಿಡಲ್ಪಟ್ಟಿದೆ; ಮತ್ತು ಅಂತಿಮವಾಗಿ ಪ್ರತಿಯೊಂದು ಐಗುಪ್ತದ ವಿಗ್ರಹಾರಾಧನೆಯ ಕೆಲವೊಂದು ರೂಪಕ್ಕೆ ಪೆಟ್ಟಾಗಿರುತ್ತದೆ.

**2. ಹೋರಾಟದ ಅಗತ್ಯತೆ.**-ಭೂಲೋಕದಲ್ಲೆಲ್ಲಾ ಒಂದೇ ಒಂದು ಕುಲವು ದೇವರ ಐಕ್ಯತೆ ಮತ್ತು ಆತ್ಮಿಕತೆಯನ್ನು ಹಿಡಿದುಕೊಂಡಿತು ಎಂಬುದನ್ನು ಜ್ಞಾಪಿಸಿಕೊಳ್ಳಿರಿ; ಮತ್ತು ಅವರು ಕೂಡಲೇ ತಮ್ಮ ವಿಶ್ವಾಸವನ್ನು ತಮ್ಮ ಜನಾಂಗಿಕ ಗುರುತನ್ನೂ ಕಳೆದು ಕೊಳ್ಳುವ ಗಂಡಾಂತರದಲ್ಲಿದ್ದ ಗುಲಾಮರಾಗಿದ್ದರು. ಸಂಖ್ಯೆಗಳು, ಐಶ್ವರ್ಯ, ಸಂಸ್ಕೃತಿ, ಬಲ, ನೂರರಿಂದ ಒಂದರವರೆಗೆ ಅವರಿಗೆ ವಿರುದ್ಧವಾಗಿದ್ದವು. ಎಂದೆಂದಿಗೂ ಕಳೆದು ಹೋಗದಂಥ ಪಾಠವನ್ನು ಅವರು ಕಲಿಯುವ ಅವಶ್ಯಕತೆಯಿತ್ತು; - ಮತ್ತು ಅದು ಕಳೆದು ಹೋಗಲಿಲ್ಲ. ಐಗುಪ್ತದ ವಿಗ್ರಹಗಳು ತಬ್ಬಿಬ್ಬಾಗಿ ಧೂಳಿಪಟವಾದವು ಇಲ್ಲವೇ ಪ್ರಾಚ್ಯವಸ್ತುಗಳ ಸಂಗ್ರಹಾಲಯಗಳಲ್ಲಿ ಅಲಂಕರಿಸಲ್ಪಟ್ಟವು; ಇಸ್ರಾಯೇಲಿನ ದೇವರು ನಾಗರಿಕ ಜಗತ್ತಿನಿಂದ ಆರಾಧಿಸಲ್ಪಡುತ್ತಾನೆ. ಐಗುಪ್ತದಲ್ಲಿಯ ಸೂಚಕ ಕಾರ್ಯಗಳೂ ಅದ್ಭುತ ಕಾರ್ಯಗಳೂ ಹಿಬ್ರೂ ಸಾಹಿತ್ಯದಲ್ಲಿ ದೊಡ್ಡ ಸ್ಥಾನವನ್ನು ತುಂಬಿಕೊಂಡವು. ಎಲ್ಲವನ್ನೂ - ಅಪ್ಪಿಕೊಳ್ಳುವ ಬಹುದೇವತಾ ತತ್ವದ ಭ್ರಷ್ಟಗೊಳಿಸುವಿಕೆಗಳ ಮಧ್ಯದಲ್ಲಿ ಪಿತೃಗಳ ನಂಬಿಕೆಗೆ ಇಸ್ರಾಯೇಲನ್ನು ಹಿಡಿದಿಟ್ಟ ಅತೀ ಪರಿಣಾಮಕಾರಿಯಾದ ಒತ್ತಡಗಳನ್ನು ಅವರು ರೂಪಿಸಿಕೊಳ್ಳಲಿಕ್ಕಾಗುವಂತೆ ಅವು ಜನಾಂಗಿಕ ಪ್ರಜ್ಞೆಯಲ್ಲಿ ವ್ಯಾಪಿಸಲ್ಪಟ್ಟವು.

**3. ಹೋರಾಟದ ಅಂತ್ಯ.**-ಕೊನೆಯ ಪೆಟ್ಟು ಬೀಳುತ್ತದೆ. ಐಗುಪ್ತದಲ್ಲಿ ಮರಣದೂತನು ಅರಮನೆಯಿಂದ ಗುಡಿಸಿಲಿನವರೆಗೆ ಪ್ರತಿಯೊಂದು ಬಾಗಿಲನ್ನು ತಟ್ಟುತ್ತಾನೆ ಮತ್ತು ಚೊಚ್ಚಲಾಗಿ ಹುಟ್ಟಿದ್ದು ಸತ್ತುಹೋಗುತ್ತದೆ, ಆದರೆ ಇಬ್ರಿಯರ ದೀನಮನೆಗಳು ಸುರಕ್ಷಿತವಾಗಿರುತ್ತವೆ. ದೇವರಿಗೆ ವಿಧೇಯರಾಗಿ, ಅವರು ಪಸ್ಕವನ್ನು ಆಚರಿಸಿದರು. ಕುರಿಮರಿಯು ಕೊಯ್ಯಲ್ಪಟ್ಟಿದೆ; ಅದರ ರಕ್ತವು ಹಿಬ್ರೂ ವಿಶ್ವಾಸಕ್ಕೆ ಸಂಕೇತದಂತೆ ರಕ್ತವು ಬಾಗಿಲಿನ ಪಟ್ಟಿಗಳಿಗೆ ಚಿಮುಕಿಸಲ್ಪಟ್ಟಿದೆ: ರಹಸ್ಯ ದೂತನು ಪಸ್ಕ ಭೋಜನವು ನಡೆಯುತ್ತಿದ್ದ ಮನೆಗಳನ್ನು ದಾಟಿಹೋಗುತ್ತಾನೆ. ಐಗುಪ್ತದಿಂದ ದೊಡ್ಡ ಸ್ವರವು ಏಳುತ್ತದೆ, ಬೇಡಿಗಳು ಬೀಳುತ್ತವೆ, ಮತ್ತು ಇಸ್ರಾಯೇಲು ಸ್ವಾತಂತ್ರಕ್ಕೆ ನಡಿಸಲ್ಪಡುತ್ತದೆ. ಒಂದು ಕೊನೆಯ ಸಲ ಫರೋಹನ ಹೃದಯವು ಕಠಿಣಪಡಿಸಲ್ಪಡುತ್ತದೆ. ಅವನು ಹಿಂಬಾಲಿಸುತ್ತಾನೆ. ಇಸ್ರಾಯೇಲ್ಯ ಬೆಟ್ಟಗಳ ಕೊಳ್ಳದಲ್ಲಿ, ಅವರ ಎದುರಿಗೆ ಕೆಂಪು ಸಮುದ್ರದಿಂದ ಬಲೆಗೆ ಸಿಕ್ಕಿದ್ದಾರೆ; ಸಮುದ್ರವು ಇಬ್ಭಾಗವಾಗುತ್ತದೆ; ಇಸ್ರಾಯೇಲ್ಯರು ದಾಟಿ ಹೋಗುತ್ತಾರೆ ಮತ್ತು ರಕ್ಷಿಸಲ್ಪಡುತ್ತಾರೆ; ಐಗುಪ್ತರು ಹಿಂಬಾಲಿಸುತ್ತಾರೆ, ಮತ್ತು ಸಮುದ್ರದಲ್ಲಿ ಮುಣುಗಿ ಹೋಗುತ್ತಾರೆ.[3]

## V. **ಐಗುಪ್ತದಲ್ಲಿ ವಿದೇಶವಾಸದ ಪರಿಣಾಮ.**

ಐಗುಪ್ತ್ಯದ ದಾಸತ್ವವು ಕಹಿಯಾಗಿದ್ದಂತೆ, ಅದು ಮಹತ್ವದ ಪರಿಣಾಮಗಳನ್ನು ಸಾಧಿಸಿತು.

**1. ಅದು ಇಸ್ರಾಯೇಲನ್ನು ಒಂದು ಜನಾಂಗವನ್ನಾಗಿ ಮಾಡಿತು.**-ಅವರು ಪಶುಪಾಲನಾ ಸಂಚಾರಿ ಹನ್ನೆರಡು ಕುಟುಂಬಗಳ ಗುಂಪಾಗಿ ಐಗುಪ್ತನ್ನು ಪ್ರವೇಶಿಸಿದರು. ಯಾಕೋಬ ಮತ್ತು ಅವನ ನೇರವಾದ ವಂಶಜರ ಸಂಖ್ಯೆ ಎಪ್ಪತ್ತು. ಸೇವಕರನ್ನೊಳಗೊಂಡು ಇಡೀ ಗೋತ್ರದ ಸಂಖ್ಯೆ ಎರಡು ಇಲ್ಲವೇ ಮೂರು ಸಾವಿರ. ಅವರು ಕಾನಾನಿನಲ್ಲಿ ಉಳಿದಿದ್ದರೆ, ಅವರು ಹನ್ನೆರಡು ಚಿಕ್ಕ ಸಂಚಾರಿ ಕುಲಗಳಾಗಿ ವಿಭಾಗವಾಗಿ ಹೋಗುವುದು ನಿಶ್ಚಿತವಾಗಿತ್ತು, ಬಹಳವಾಗಿ ಸಂಖ್ಯೆಯಿರುವ ದೇಶದಲ್ಲಿ, ದಬ್ಬಾಳಿಕೆಯ ಬಲವಾದ ಹಸ್ತದ ಕೆಳಗೆ ಅವರನ್ನು ಒಂದು ಜನಾಂಗವಾಗಿ ಕಟ್ಟಲ್ಪಟ್ಟಿತು.

**2. ಅದು ಅವರನ್ನು ನಾಗರಿಕತ್ವಕ್ಕೆ ನಡಿಸಿತು.**-ಅವರು ಪಶುಪಾಲಕ ಸಂಚಾರಿಗಳಾಗಿ ಕಾನಾನನ್ನು ಬಿಟ್ಟರು. ಅವರಿಗೆ ಯಾವ ಮಟ್ಟದ ನಾಗರಿಕತೆ ಇತ್ತೆಂಬುದನ್ನು ನಾವು ಮೇಲೆ ನೋಡಿದ್ದೇವೆ. ಆದರೆ ಅವರು ಐಗುಪ್ತದಲ್ಲಿ ಕೇವಲ ಕುರುಬರಾಗಿಯೇ ಬಹಳ ಸಮಯ ಮುಂದುವರಿಯಲಾಗಲಿಲ್ಲ. ಐಗುಪ್ತವು ಯಾವಾಗಲೂ ಒಂದು ಒಕ್ಕಲುತನದ ದೇಶವಾಗಿರುವುದು ಹಾಗೂ ದೇಶವಾಗಿತ್ತು, ಹೀಗಿದ್ದರೂ, ಅದು ಸಾವಿರ ವರ್ಷಗಳ ವರೆಗೆ, ಜಗತ್ತಿನ ಬೌದ್ಧಿಕ ಜೀವನದಲ್ಲಿಯೂ ಭೌತಿಕ ನಾಗರಿಕತೆಯಲ್ಲಿಯೂ ನಾಯಕನಾಗಿತ್ತು, ಅಂಥ ಶಾಲೆಯಲ್ಲಿ ದೀರ್ಘವಾದ ಸಂಚಾರದಿಂದ ಇಬ್ರಿಯರು ವರವುಳ್ಳ ಜನರಾಗಿದ್ದು ಅದರ ಲಾಭ ಪಡೆದುಕೊಂಡರು. ಮೋಶೆಯು ವಿಶೇಷವಾಗಿ "ಐಗುಪ್ತರ ಎಲ್ಲಾ ಜ್ಞಾನದಲ್ಲಿ ತರಬೇತಿ ಹೊಂದಿದನು" (ಅಪೊಸ್ತಲರ ಕೃತ್ಯಗಳು 7:22); ಆದರೆ ದೇವ ದರ್ಶನ ಗುಡಾರವನ್ನು ಕಟ್ಟುವ ವಿವರಣೆಯಿಂದ ಅವನಿಗೆ ಕುಶಲ ಸಹಾಯಕರು ಇದ್ದರೆಂಬುದು ಸ್ಪಷ್ಟವಾಗುತ್ತದೆ (ವಿಮೋಚನಕಾಂಡ 25-40).

**3. ಅದರ ಮುಕ್ತಾಯದ ಘಟನೆಗಳು ಜನಾಂಗಿಕ ನಂಬಿಕೆಯನ್ನು ದೃಢಪಡಿಸಿದವು.**-ಐಗುಪ್ತದಲ್ಲಿಯೇ ಅವರು ಸ್ಥಿರವಾಗಿ ನೆಲೆಸಿದ್ದರೆ, ಅವರು ಅಂತಿಮವಾಗಿ ತಮ್ಮ ಜನಾಂಗಿಕ ನಂಬಿಕೆಯನ್ನೂ, ಜನಾಂಗಿಕ ಗುರುತಿಸಿಕೊಳ್ಳವಿಕೆಯನ್ನೂ ಕಳೆದುಕೊಳ್ಳುತ್ತಿದ್ದರು. ಆದರೆ ಐಗುಪ್ತ್ಯವು ಇಸ್ರಾಯೇಲ್ಯರು ಎಂದೂ ಮರೆತುಹೋಗದ ಯೆಹೋವನು ಪಾಠಗಳನ್ನು ಬರೆದ ಕಪ್ಪು ಹಲಿಗೆಯಾಯಿತು.[4] ಪುನಃ ಪುನಃ ವಿಗ್ರಹಾರಧನೆಯಲ್ಲಿ ಬಿದ್ದುಹೋದ ಸಂದರ್ಭಗಳಿದ್ದರೂ ದೀರ್ಘಕಾಲದಲ್ಲಿ ಅವರು ಜನಾಂಗಿಕ ನಂಬಿಕೆಗೆ ಸತ್ಯವಾಗಿದ್ದರು. ಈಗ ಅವರು ಜಯಿಸಲು ಕಾನಾನಿಗೆ ಹಿಂದಿರುಗಬೇಕಾಗಿತ್ತು, ಎರಡು ನೂರು ವರ್ಷಗಳ ವರೆಗೆ ಅಬ್ರಹಾಮ, ಇಸಾಕ, ಮತ್ತು ಯಾಕೋಬರು ಯಾತ್ರಿಕರಂತೆ ಅಲೆದಾಡಿದ್ದರು. ಆದರೆ ಅವರು ಕೂಡಲೇ ಪ್ರವೇಶಿಸಬೇಕಾಗಿರಲಿಲ್ಲ. ಕೆಲವೇ ದಿನಗಳ ಪ್ರಯಾಣವು ಅವರನ್ನು ಕಾನಾನಿಗೆ ತರುತ್ತಿತ್ತು. ಆದರೆ ವಾಗ್ದತ್ತ ದೇಶವನ್ನು ವಶಪಡಿಸಿಕೊಳ್ಳುವುದಕ್ಕೆ ಯೋಗ್ಯರಾಗಲು ಸಂಘಟನೆಯ ಕಾರ್ಯ ಮತ್ತು ಶಿಕ್ಷಣದ ನಾಲ್ವತ್ತು ವರ್ಷಗಳು ಮಧ್ಯೆಬಂದವು.

---

ಟಿಪ್ಪಣಿಗಳು

[1]ಐಗುಪ್ತದಲ್ಲಿ ಪ್ರಯಾಣದ ಅವಧಿಯು ಬಗೆಹರಿಯದ ಸಮಸ್ಯೆಗಳಲ್ಲಿ ಒಂದಾಗಿದೆ. ಹಿಬ್ರೂ ಬೈಬಲು ಅದನ್ನು ನಾಲ್ಕುನೂರು ವರ್ಷಗಳು (ಹೆಚ್ಚು ನಿರ್ದಿಷ್ಟವಾಗಿ ನಾಲ್ಕನೂರು ಮೂವತ್ತು) ಎಂದು ಮಾಡುವಂತೆ ತೋರುತ್ತದೆ. ಹೋಲಿಸು ಆದಿಕಾಂಡ 15:13; ವಿಮೋಚನಕಾಂಡ 12:40,

44; ಅಪೊಸ್ತಲರ ಕೃತ್ಯಗಳು 7:6. ಪೌಲನು ಗಲಾತ್ಯ 3:17ರಲ್ಲಿ ಅನುಸರಿಸಿದ, ಸೆಪ್ಟುವಗಿಂತದ ವಿಮೋಚನಕಾಂಡ 12:40, 41 ಕಾನಾನಿನಲ್ಲಿಯ ಪಿತೃಗಳ ಅಲೆದಾಟಗಳನ್ನು ನಾಲ್ಕುನೂರು ಮೂವತ್ತು ವರ್ಷಗಳಲ್ಲಿ ಒಳಗೊಂಡಿರುತ್ತದೆ. [2]ವಿಮೋಚನಕಾಂಡ 3:6. [3]ದಾಟಿಹೋಗುವ - ಸ್ಥಳದ ಅತ್ಯುತ್ತಮವಾದ ಚರ್ಚೆಗಾಗಿ ನೋಡಿರಿ: McGarvey's "Lands of the Bible," pp. 438-443. [4]ಡೀನ್ ಅವರಲ್ಲಿ "wrought" ಎಂದಿದೆ.

© 2009 Truth for Today